# ಬರಲಿದೆ ಪೂರ್ಣ ಡಿಜಿಟಲ್ ಬ್ಯಾಂಕ್!

■ **ಶಶಿಕುಮಾರ್ ಸಿ.**




ನೀತಿ ಆಯೋಗವು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹೊಸ ಮೈಲುಗಲ್ಲು ಸೃಷ್ಟಿಸುವತ್ತ ಮುಖಮಾಡಿದ್ದು, ದೇಶದೆಲ್ಲೆಡೆ ಪೂರ್ಣ ಪ್ರಮಾಣದ ಡಿಜಿಟಲ್ ಬ್ಯಾಂಕ್ ಸ್ಥಾಪಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದೆ. 'ಡಿಜಿಟಲ್ ಬ್ಯಾಂಕ್ಸ್: ಎ ಪ್ರಪೋಸಲ್ ಫಾರ್ ಲೈಸೆನ್ಸಿಂಗ್ ಆ್ಯಂಡ್ ರೆಗ್ಯುಲೇಟರಿ ರಿಜಿಮ್ ಫಾರ್ ಇಂಡಿಯಾ' ಎಂಬ ಶೀರ್ಷಿಕೆಯ ಚರ್ಚಾ ಪತ್ರವನ್ನು ಆಯೋಗವು ಪ್ರಕಟಿಸಿ ಡಿಜಿಟಲ್ ಬ್ಯಾಂಕ್‌ಗಳ ಬಗ್ಗೆ ಪ್ರಸ್ತಾಪಿಸಿದೆ. ಈಗಿರುವ ಬ್ಯಾಂಕ್‌ಗಳು ಭೌತಿಕ ರೂಪ ಹೊಂದಿದ್ದು, ಅವೆಲ್ಲವೂ ಡಿಜಿಟಲೀಕರಣಕ್ಕೆ ಒಗ್ಗಿಕೊಂಡಿವೆ.

ಡಿಜಿಟಲ್ ಬ್ಯಾಂಕ್‌ಗಳು ಅಂತರ್ಜಾಲ ಮತ್ತು ಇನ್ನಿತರ ಪರ್ಯಾಯಗಳ ಮೂಲಕ ಭೌತಿಕ ಬ್ಯಾಂಕ್‌ಗಳು ನೀಡುವಂತಹ ಎಲ್ಲ ಸೇವೆಯನ್ನೂ ನೀಡಲಿವೆ. ಕೇಂದ್ರ ಕಚೇರಿಯ ಹೊರತು ಯಾವುದೇ ರೀತಿಯ ಭೌತಿಕ ಶಾಖೆಗಳನ್ನು ಇವು ಹೊಂದಿರುವುದಿಲ್ಲ. ಬ್ಯಾಂಕಿಂಗ್ ರೆಗ್ಯುಲೇಷನ್ ಆ್ಯಕ್ಟ್ 1949ರ ಚೌಕಟ್ಟಿನಲ್ಲೇ ಡಿಜಿಟಲ್ ಬ್ಯಾಂಕ್‌ಗಳು ರಚನೆಗೊಳ್ಳಲಿವೆ ಎಂದು ನೀತಿ ಆಯೋಗವು ತಿಳಿಸಿದೆ.

ಜನರ ಖಾತೆಯನ್ನು ತೆರೆಯುವುದು, ಅವರಿಂದ ಠೇವಣಿ ಸ್ವೀಕರಿಸುವುದು, ಸಾಲ ವಿತರಿಸುವುದು ಮತ್ತು ಭೌತಿಕ ಬ್ಯಾಂಕ್‌ಗಳು ನೀಡುವಂತಹ ಪೂರ್ಣ ಪ್ರಮಾಣದ ಹಣಕಾಸು ಸೇವೆಗಳನ್ನು ಆನ್‌ಲೈನ್ ಮೂಲಕವೇ ಒದಗಿಸುವುದು ಡಿಜಿಟಲ್ ಬ್ಯಾಂಕ್‌ಗಳ ಉದ್ದೇಶ ಆಗಿರಲಿದೆ. ಯುಪಿಐ ಸಹ ಈ ನಿಟ್ಟಿನಲ್ಲಿ ಕೆಲಸ ಮಾಡಲಿದೆ. ■

---

# ಡಿಜಿಟಲ್ ಕರೆನ್ಸಿ !




ಭಾರತೀಯ ರಿಸರ್ವ್ ಬ್ಯಾಂಕ್ ಅಧಿಕೃತ ಡಿಜಿಟಲ್ ಕರೆನ್ಸಿಯನ್ನು ಬಿಡುಗಡೆ ಮಾಡಲಿದೆ! ಈ ಬಗ್ಗೆ ಅಧಿಕೃತ ಆದೇಶ ಹೊರಬೀಳದಿದ್ದರೂ ಡಿಜಿಟಲ್ ಕರೆನ್ಸಿ ಜಾರಿಗೆ ತರುವ ನಿಟ್ಟಿನಲ್ಲಿ ಬಲವಾದ ಪ್ರಯತ್ನಗಳು ನಡೆದಿವೆ. ಈ ಕರೆನ್ಸಿಗೆ ಪೂರಕವಾದ ಕಾನೂನು ರೂಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ತೊಡಗಿದೆ ಎನ್ನಲಾಗಿದೆ.

ಡಿಜಿಟಲ್ ಕರೆನ್ಸಿಗಳ ಅಧ್ಯಯನ ಮತ್ತು ಕ್ರಿಪ್ಟೊಕರೆನ್ಸಿ ಸಂಬಂಧ ಜಾರಿಗೆ ತರಬಹುದಾದ ನಿರ್ದಿಷ್ಟ ಕ್ರಮಗಳ ಶಿಫಾರಸ್ಸಿಗೆ ಕೇಂದ್ರ ಸರ್ಕಾರ ಈ ಹಿಂದೆ ಅಂತರ್ ಸಚಿವಾಲಯ ಸಮಿತಿ ರಚಿಸಿತ್ತು. ಆ ಸಮಿತಿಯ ಶಿಫಾರಸು ಆಧರಿಸಿಯೇ ಈಗ 'ದಿ ಕ್ರಿಪ್ಟೊ ಕರೆನ್ಸಿ ರೆಗ್ಯುಲೇಷನ್ ಆಫ್ ಡಿಜಿಟಲ್ ಕರೆನ್ಸಿ ಬಿಲ್, 2021' ಸಿದ್ಧವಾಗಿದೆ. 'ಕೇಂದ್ರ ಸರ್ಕಾರವು ಜಾರಿಗೆ ತರಲಿರುವ ವರ್ಚುವಲ್ ಕರೆನ್ಸಿಯ ಹೊರತು ಬೇರೆ ಯಾವುದೇ ಖಾಸಗಿ ಡಿಜಿಟಲ್ ಕರೆನ್ಸಿಗಳಿಗೆ ಕಾನೂನಿನ ಮಾನ್ಯತೆ ಇರಬಾರದು. ಅಂತವುಗಳ ವಹಿವಾಟನ್ನು ನಿಷೇಧಿಸಬೇಕು' ಎಂದು ಸಮಿತಿ ಶಿಫಾರಸು ಮಾಡಿದೆ.

### ತೆರಿಗೆ ಸಾಧ್ಯತೆ

ಬಿಟ್‌ಕಾಯಿನ್ ಹಾಗೂ ಕ್ರಿಪ್ಟೊಕರೆನ್ಸಿಗೆ ದೇಶದಲ್ಲಿ ಮಾನ್ಯತೆ ಇಲ್ಲ. ಅವುಗಳಿಗೆ ಸಂಬಂಧ ಅಧಿಕೃತ ನಿಯಮ–ನಿಬಂಧನೆಗಳೂ ಇಲ್ಲ. ಹೀಗಾಗಿ ಈ ಕರೆನ್ಸಿಗಳ ವಹಿವಾಟಿಗೆ ದೇಶದಲ್ಲಿ ಕಡಿವಾಣ ಹಾಕುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ.

ಡಿಜಿಟಲೀಕರಣದ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಕೇಂದ್ರ ಸರ್ಕಾರವು ಡಿಜಿಟಲ್ ರೂಪದ ನಗದು ಆಗಿರುವ ಬಿಟ್‌ಕಾಯಿನ್, ಕ್ರಿಪ್ಟೊಕರೆನ್ಸಿಯಂತಹ ತರಹೇವಾರು ಕರೆನ್ಸಿಗಳ ವಹಿವಾಟಿಗೆ ನಿಷೇಧ ಹೇರುವ ಸಾಧ್ಯತೆ ಕಡಿಮೆ. ಕಾರಣ ಬಿಟ್‌ಕಾಯಿನ್‌ನ ಸಹ ಡಿಜಿಲೀಕರಣದ ಭಾಗವೇ ಆಗಿದೆ. ಅಲ್ಲದೆ ಈ ಚಾಲ್ತಿಯಲ್ಲಿರುವ ಬಿಟ್‌ಕಾಯಿನ್‌ಗಳ ಮಾರುಕಟ್ಟೆ ಮೌಲ್ಯ 1 ಲಕ್ಷ ಕೋಟಿ ಡಾಲರ್.

ಇವುಗಳ ವಹಿವಾಟಿಗೆ ಪ್ರತ್ಯೇಕ ಕಾಯ್ದೆಗಳನ್ನು ಜಾರಿಗೆ ತಂದು ತೆರಿಗೆ ವಿಧಿಸುವ ಸಾಧ್ಯತೆ ಇದೆ. ಹೊಸದಾಗಿ ಜಾರಿಗೆ ತರಲು ಉದ್ದೇಶಿಸಿರುವ ಕಾಯ್ದೆಯ ಮುಖ್ಯ ಉದ್ದೇಶ ಬಿಟ್‌ಕಾಯಿನ್ ಮೂಲಕ ನಡೆಯುತ್ತಿರುವ ಹಾಗೂ ನಡೆಯಬಹುದಾದ ಕಪ್ಪುಹಣ ಹಾಗೂ ಹವಾಲಾ ವ್ಯವಹಾರಕ್ಕೆ ತಡೆ ಹಾಕುವುದು. ಜೊತೆಗೆ ಆದಾಯ ತೆರಿಗೆ ಇಲಾಖೆ ಹಾಗೂ ಜಾರಿ ನಿರ್ದೇಶನಾಲಯದ ಕಣ್ಣುತಪ್ಪಿಸಿ ನಡೆಸುತ್ತಿದ್ದ ವ್ಯವಹಾರವನ್ನು ಅವುಗಳ ವ್ಯಾಪ್ತಿಗೆ ಒಳಪಡಿಸುವುದು.

ಕ್ರಿಪ್ಟೊಕರೆನ್ಸಿಗಳ ಮೇಲೆ ಕೇಂದ್ರ ಸರ್ಕಾರ ಪ್ರಸ್ತುತ ತೆರಿಗೆ ವಿಧಿಸಿಲ್ಲ. ಆದರೆ, ಕ್ರಿಪ್ಟೊಕರೆನ್ಸಿಯ ಹೂಡಿಕೆಯಿಂದ ಪಡೆದ ಲಾಭದ ಬಗ್ಗೆ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ ಕಡ್ಡಾಯವಾಗಿ ಘೋಷಿಸಬೇಕು ಆದರೆ, ಕ್ರಿಪ್ಟೊಕರೆನ್ಸಿಯ ವಹಿವಾಟು ನಡೆಸುತ್ತಿರುವವರು ಈ ಬಗ್ಗೆ ಉದ್ದೇಶಪೂರ್ವಕವಾಗಿ ಲಾಭದ ಬಗ್ಗೆ ಆದಾಯ ಇಲಾಖೆ ರಿಟರ್ನ್ಸ್ ವೇಳೆ ಘೋಷಿಸುತ್ತಿಲ್ಲ. ■